ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

ಸಿಸಿ ನಂ. **484/2023**

ಚಾಸಾ-4 ಫ್ರಾಸಾ-1

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 03-02-2026

| | | |
|---|---|---|
| ಹೆಸರು | : | ಪಂಡಿತ |
| ತಂದೆಯ ಹೆಸರು | : | ಗಣಪತಿ ಪಂಡ್ರೆ |
| ವಯಸ್ಸು | : | 37 ವರ್ಷ |
| ಉದ್ಯೋಗ | : | HC-347 |
| ವಾಸಸ್ಥಳ | : | ಅಫಜಲಪುರ ಪಿ.ಎಸ್. |

-: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-

ಜುಲೈ 2022 ರಿಂದ ಸದ್ಯದವರೆಗೆ ನಾನು ಅಫಜಲಪೂರ ಪೋಲಿಸ ಠಾಣೆಯಲ್ಲಿ ಪೋಲಿಸ ಮುಖ್ಯಪೇದೆಯಾಗಿ ಕಾರ್ಯನಿರ್ವಹಿಸುತ್ತಿದ್ದೇನೆ.

ದಿಃ 07-03-2023 ರಂದು ರಾತ್ರಿ 10-15 ಕ್ಕೆ ಚಾಸಾ 1 ರವರು ತಮಗೆ ಬಂದ ಖಚಿತ ಭಾತ್ಮಿ ತಿಳಿಸಿದ್ದು ಏನೆಂದರೆ ಲಕ್ಕಿ ಧಾಬಾದ ಹಿಂದಗಡೆ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದು ಚಾಸಾ 5 ರವರನ್ನು ಕರೆದು ಇಬ್ಬರು ಪಂಚರನ್ನು ಬರಮಾಡಿಕೊಂಡು ಬರಲು ತಿಳಿಸಿದಾಗ ಅವರು ಶಂಕರ ಮತ್ತು ಚಂದ್ರಕಾಂತ ಎನ್ನುವವರನ್ನು ಕರೆದುಕೊಂಡು ಬಂದಿರುತ್ತಾರೆ. ನಾನು ಚಾಸಾ 5, ಪಂಚರು ಚಾಸಾ 1 ರವರೊಂದಿಗೆ ಇಲಾಖಾ ಜೀಪಿನಲ್ಲಿ ಮಾಹಿತಿ ಬಂದ ಸ್ಥಳಕ್ಕೆ ಹೋಗಿರುತ್ತೇವೆ. ಸಿಂದಗಿ ರಸ್ತೆಗೆ ಇರುವ ನಾಷನಲ ಫಂಕ್ಷನ ಹಾಲ ಹತ್ತಿರ ವಾಹನ ನಿಲ್ಲಿಸಿ ಕಾಲ್ನಡಿಗೆಯಲ್ಲಿ ಲಕ್ಕಿ ಧಾಬಾದ ಹತ್ತಿರ ಹೋಗಿರುತ್ತೇವೆ. ಪಂಚರ ಸಮಕ್ಷಮ ಆರೋಪಿತನನ್ನು ಬಂಧಿಸಿ ವಿಚಾರಿಸಿದಾಗ ಆತನು ಮದ್ಯ ಮಾರಾಟ ಮಾಡುತ್ತಿರುವುದು ತಿಳಿಸಿದ್ದು ಮತ್ತು ಆತನ ಹೆಸರು ದತ್ತು ಬಸಣ್ಣ ಬ್ಯಾಡಗಿ ಎಂದು ತಿಳಿಸಿರುತ್ತಾನೆ. ಮತು ಪರವಾನಿಗೆ ಕುರಿತು ವಿಚಾರಿಸಿದಾಗ ಆತನು ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿರುತ್ತೇನೆ.

ಆತನ ಬಳಿ ಇದ್ದ ಮದ್ಯದ ಟೆಟ್ರಾ ಪ್ಯಾಕೆಟುಗಳನ್ನು ಪರಿಶೀಲಿಸಿದಾಗ ಒಟ್ಟು ಅಲ್ಲಿ 12 ಕಂಪನಿಯ ಮದ್ಯ ದೊರೆತಿರುತ್ತದೆ. ಅದರಲ್ಲಿ 17 ಕಿಂಗ ಫಿಶರ ಸ್ಟ್ರಾಂಗ ಬಾಟಲಿಗಳು, 14 ಬಡವೈಸರ, 7 ಕಿಂಟ ಫಿಶರ ಪ್ರೀಮಿಯಂ, ಎಂಸಿರಮ 27, ಆರ್.ಸಿ. 5, ಐ.ಬಿ. 10 ಮತ್ತು ಬ್ಯಾಗ ಪೈಪರ 27, ಎಂ.ಸಿ. ವಿಸ್ಕಿ 13 ಮತ್ತು ಆಫೀಸರ ಚಾಯ 5, ಒರಿಜಿನಲ ಚಾಯ್ಸ 23 ಮತ್ತು ಓ.ಟಿ. 13 ಮತ್ತು ಟೂಬರ್ಗ 9 ಇವುಗಳನ್ನು ಜಪ್ತಿ ಪಡಿಸಿಕೊಂಡು ಇವುಗಳಿಗೆ ಪ್ರತ್ಯೇಕವಾಗಿ NSS ಮುದ್ರೆ ಹಾಕಿರುತ್ತೇವೆ. ಇಬ್ಬರು ಪಂಚರ ಸಮಕ್ಷಮ 10-40 ರಿಂದ 11-40 ರವರೆಗೆ ಜಪ್ತಿ ಪಂಚನಾಮೆ ಮಾಡಿರುತ್ತೇವೆ. ನಂತರ 11-50 ಕ್ಕೆ ಠಾಣೆಗೆ ಬಂದಿರುತ್ತೇವೆ.

ಸಾಕ್ಷಿಗೆ ತೆರೆದ ನ್ಯಾಯಾಲಯದಲ್ಲಿ ಸೀಲು ಮಾಡಿದ ಬಿಳಿ ಬಟ್ಟೆ ಚೀಲಗಳನ್ನು ತೆಗೆದು ಅವುಗಳಲ್ಲಿ ಇರುವ ಸೀಲು ಮಾಡಿದ 650 ML ನ 9 ಟೂಬರ್ಗ ಬಾಟಲಿಗಳು ಸಾಕ್ಷಿಗೆ ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ. **1** ಎಂದು ಗುರುತಿಸಲಾಯಿತು.

ಅದರಂತೆ ಸಾಕ್ಷಿಗೆ 650 ML ನ 7 ಕಿಂಟ ಫಿಶರ ಪ್ರೀಮಿಯಂ ಬಾಟಲಿಗಳು ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ. **2** ಎಂದು ಗುರುತಿಸಲಾಯಿತು.

ಅದರಂತೆ ಸಾಕ್ಷಿಗೆ 180 ML ನ ಇಂಪರಿಯಲ ಬ್ಲೂ 10 ಬಾಟಲಿಗಳು ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ. **3** ಎಂದು ಗುರುತಿಸಲಾಯಿತು.

ಅದರಂತೆ ಸಾಕ್ಷಿಗೆ 180 ML ನ ಮ್ಯಾಕಡವಲ ವಿಸ್ಕಿ 23 ಬಾಟಲಿಗಳು ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ. **4** ಎಂದು ಗುರುತಿಸಲಾಯಿತು.

ಅದರಂತೆ ಸಾಕ್ಷಿಗೆ 180 ML ನ ಆರ್.ಸಿ. 5 ಬಾಟಲಿಗಳು ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ. **5** ಎಂದು ಗುರುತಿಸಲಾಯಿತು.

ಅದರಂತೆ ಸಾಕ್ಷಿಗೆ 650 ML ನ 14 ಬಡವೈಸರ ಬಾಟಲಿಗಳು ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ. **6** ಎಂದು ಗುರುತಿಸಲಾಯಿತು.

ಅದರಂತೆ ಸಾಕ್ಷಿಗೆ 650 ML ನ 17 ಕಿಂಗ ಫಿಶರ ಸ್ಟ್ರಾಂಗ ಬಾಟಲಿಗಳು ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ. **7** ಎಂದು ಗುರುತಿಸಲಾಯಿತು.

ಅದರಂತೆ ಸಾಕ್ಷಿಗೆ 180 ML ನ 13 ಮ್ಯಾಕಡವಲ ರಮ್ ಟೆಟ್ರಾ ಪ್ಯಾಕೆಟುಗಳನ್ನು ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ. **8** ಎಂದು ಗುರುತಿಸಲಾಯಿತು.

ಅದರಂತೆ ಸಾಕ್ಷಿಗೆ 180 ML ನ ಆಫೀಸರ ಚಾಯ್ಸ ವಿಸ್ಕಿಯ 5 ಟೆಟ್ರಾ ಪ್ಯಾಕೆಟುಗಳನ್ನು ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ. **9** ಎಂದು ಗುರುತಿಸಲಾಯಿತು.

ಅದರಂತೆ ಸಾಕ್ಷಿಗೆ 180 ML ನ ಬ್ಯಾಗ ಪೈಪರ ವಿಸ್ಕಿಯ 27 ಟೆಟ್ರಾ ಪ್ಯಾಕೆಟುಗಳನ್ನು ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ. **10** ಎಂದು ಗುರುತಿಸಲಾಯಿತು.

ಅದರಂತೆ ಸಾಕ್ಷಿಗೆ 180 ML ನ ಓಲ್ಡ ಟವರ ವಿಸ್ಕಿಯ 13 ಟೆಟ್ರಾ ಪ್ಯಾಕೆಟುಗಳನ್ನು ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ. **11** ಎಂದು ಗುರುತಿಸಲಾಯಿತು.

ಅದರಂತೆ ಸಾಕ್ಷಿಗೆ 180 ML ನ ಒರಿಜಿನಲ ಚಾಯ್ಸ ವಿಸ್ಕಿಯ 42 ಟೆಟ್ರಾ ಪ್ಯಾಕೆಟುಗಳನ್ನು ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ. **12** ಎಂದು ಗುರುತಿಸಲಾಯಿತು.

ಆರೋಪಿತನಿಂದ ವಶಪಡಿಸಿಕೊಂಡರು ಎಂದು ಹೇಳುವ ರೂ. 1840/- ಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ. **13** ಎಂದು ಗುರುತಿಸಲಾಯಿತು. ಆರೋಪಿತನಿಗೆ ನೋಡಿದಲ್ಲಿ ಗುರುತಿಸುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **ASK** ವಕೀಲರಿಂದಃ-</u>

ಗುನ್ನೆ ಸ್ಥಳ ಚೆಕ್ಕುಬಂದಿ ಪೂರ್ವಕ್ಕೆ ಅಫಜಲಪುರ ರಸ್ತೆ, ಪಶ್ಚಿಮಕ್ಕೆ ಸಿಂದಗಿ ರಸ್ತೆ, ದಕ್ಷಿಣಕ್ಕೆ ಹಳೆ ನ್ಯಾಯಾಲಯ ಕಟ್ಟಡ, ಉತ್ತರಕ್ಕೆ ಲಕ್ಕಿ ಧಾಬಾ ಇರುತ್ತದೆ. ಚಾಸಾ 2 , 3 ಮತ್ತು 5 ರವರು ನಮ್ಮೊಂದಿಗೆ ಬಂದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ರವರು 10-15 ಕ್ಕೆ ಕರೆದಿರುತ್ತಾರೆ. ಈ ಮಾತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮು.ಮಾ. 1 ರಿಂದ 13 ಮತ್ತು ಆರೋಪಿತನಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮು.ಮಾ. 1 ರಿಂದ 12 ರಂತೆ ಕಚಡಾ ಡಬ್ಬಿಯಲ್ಲಿ ಸಿಗುತ್ತವೆ ಎಂದರೆ ಸರಿಯಲ್ಲ. ಮುದ್ದೆಮಾಲಿಗೂ ಮತ್ತು ಮೌಲ್ಯಕ್ಕೆ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪಂಚನಾಮೆ ಪೋಲಿಸ ಠಾಣೆಯಲ್ಲಿ ಮಾಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. 10-40 ರಿಂದ 11-40 ರವರೆಗೆ ಜಪ್ತಿ ಪಂಚನಾಮೆ ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ. 13 ಆರೋಪಿ ಕಡೆಯಿಂದ ಜಪ್ತಿ ಪಡಿಸಿಕೊಂಡ ಹಣ ಎಂದರೆ ಸರಿಯಲ್ಲ.

ಚಾಸಾ 1 ರವರ ನನ್ನ ಮೇಲಾಧಿಕಾರಿ ಇದ್ದು ಅವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 11-50 ಕ್ಕೆ ಮರಳಿ ಠಾಣೆಗೆ ಬಂದಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಚೇರಿ ಅಂಕಿ ಸಂಖ್ಯೆಗೋಸ್ಕರ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ